


بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸ್ಜಿದ್‌ನಿಂದ 14-06-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಝೈದ್ ಬಿನ್ ಹಾರಿಸ(ರ)ರ ಬಗ್ಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸಿದ್ದೆನು. ತಾಯಿಫ್‌ಗೆ ಅವರು ಹೋದ ಬಗ್ಗೆ ಸಹ ಪ್ರಸ್ತಾಪಿಸಿದ್ದೆನು. ಅವರು ಮಾಡಿದ ಈ ಪ್ರಯಾಣದ ಬಗ್ಗೆ ಸ್ವಲ್ಪ ಹೆಚ್ಚಿನ ಮಾಹಿತಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಬರೆದ ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಿಂದ ಉಲ್ಲೇಖಿಸಿ ಹೇಳುವೆನು. ತಾಯಿಫ್ ಒಂದು ಪ್ರಸಿದ್ಧ ಸ್ಥಳವಾಗಿದೆ. ಅದು ಮಕ್ಕದಿಂದ ದಕ್ಷಿಣ ಪೂರ್ವ ದಿಕ್ಕಿನಲ್ಲಿ ಅಂದಾಜು ನಲ್ವತ್ತು ಮೈಲು ದೂರದಲ್ಲಿದೆ. ಆ ಕಾಲದಲ್ಲಿ ಬನೂ ಸಖೀಫ್ ಗೋತ್ರದ ಜನರು ಅಲ್ಲಿ ವಾಸಿಸುತ್ತಿದ್ದರು. ಕಅಬವನ್ನು ಹೊಂದಿರುವ ಮಕ್ಕದ ವೈಶಿಷ್ಟ್ಯವನ್ನು ಹೊರತುಪಡಿಸಿದರೆ ತಾಯಿಫ್ ನಗರ ಮಕ್ಕ ನಗರಕ್ಕೆ ಸಮಾನವಾಗಿತ್ತು. ಅದರಲ್ಲಿ ದೊಡ್ಡ ದೊಡ್ಡ ಕುಲೀನರೂ ಐಶ್ವರ್ಯವಂತರೂ ವಾಸಿಸುತ್ತಿದ್ದರು. ತಾಯಿಫ್ ನಗರದ ಮಹತ್ವದ ಬಗ್ಗೆ ಮಕ್ಕದ ಜನರು ಸಹ ಅಂಗೀಕರಿಸಿದ್ದರು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಇದರ ಬಗ್ಗೆ ಮಕ್ಕದ ಜನರ ಮಾತನ್ನೇ ಹೀಗೆ ಉಲ್ಲೇಖಿಸಿದ್ದಾನೆ: **ಲೌಲಾ ನುಝ್ಝಿಲ ಹಾಝುಲ್ ಖುರ್‌ಆನು ಅಲಾ ರಜುಲಿನ್ ಮಿನಲ್ ಖರ್‌ಯತೈನಿ ಅಝೀಮ್.** ಈ ಎರಡು ಪಟ್ಟಣಗಳಲ್ಲಿರುವ (ಮಕ್ಕ ಅಥವಾ ತಾಯಿಫ್) ಯಾರಾದರೊಬ್ಬ ಗಣ್ಯ ಪುರುಷನಿಗೆ ಈ ಖುರ್‌ಆನ್ ಏಕೆ ಅವತೀರ್ಣಗೊಳ್ಳಲಿಲ್ಲ. (43:32).

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಬವಿ ವರ್ಷ 10 ಶವ್ವಾಲ್ ತಿಂಗಳಲ್ಲಿ ತಾಯಿಫ್‌ಗೆ ಹೋದರು. ಕೆಲವು ವರದಿಗಳ ಪ್ರಕಾರ ಅವರು ಒಬ್ಬಂಟಿಗನಾಗಿ ಅಲ್ಲಿಗೆ ಹೋದರು. ಬೇರೆ ಕೆಲವು ವರದಿಗಳ ಪ್ರಕಾರ ಅವರ ಜೊತೆಗೆ ಝೈದ್ ಬಿನ್ ಹಾರಿಸ(ರ) ಸಹ ಇದ್ದರು. ಅವರು ತಾಯಿಫ್‌ನಲ್ಲಿ ಹತ್ತು ದಿನಗಳ ಕಾಲ ವಾಸಿಸಿ ನಗರದ ಅನೇಕ ಗಣ್ಯರನ್ನು ಒಬ್ಬರ ನಂತರ ಇನ್ನೊಬ್ಬರನ್ನಾಗಿ ಭೇಟಿಯಾದರು. ಆದರೆ ಆ ನಗರದ ಜನರು ಮಕ್ಕದ ಜನರ ಹಾಗೆ ಇಸ್ಲಾಮಿಗೆ ಪ್ರವೇಶಿಸುವ ಭಾಗ್ಯ ಆಗ ಗಳಿಸಿರಲಿಲ್ಲ. ಎಲ್ಲರೂ ನಿರಾಕರಿಸಿ ಅಪಹಾಸ್ಯ ಮಾಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೊನೆಯದಾಗಿ ತಾಯಿಫ್ ನಗರದ ಅತ್ಯಂತ ಹಿರಿಯ ಶ್ರೀಮಂತನಾದ ಅಬ್ದು ಯಾಲೈಲ್ ಬಳಿಗೆ ಹೋಗಿ ಇಸ್ಲಾಮಿಗೆ ಆಹ್ವಾನ ನೀಡಿದರು. ಆದರೆ ಅವನು ಸಹ ಸ್ಪಷ್ಟವಾಗಿ ಆಹ್ವಾನವನ್ನು ನಿರಾಕರಿಸಿ ಅವರನ್ನು ಪರಿಹಾಸ ಮಾಡಿದನು. ಅನಂತರ ಆ ದುರದೃಷ್ಟಶಾಲಿ ಮನುಷ್ಯ ನಗರದಲ್ಲಿ ಅಲೆದಾಡುವ ಪುಂಡರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬೆನ್ನಟ್ಟುವಂತೆ ಮಾಡಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಗರದಿಂದ ಹೊರಗೆ ಹೋಗುವಾಗ ಈ ಜನರು ಕೇಕೆ ಹಾಕುತ್ತಾ ಅವರನ್ನು ಹಿಂಬಾಲಿಸಿ ಅವರಿಗೆ ಕಲ್ಲೆಸೆಯಲು ಪ್ರಾರಂಭಿಸಿದರು. ಪೈಗಂಬರರ ದೇಹವಿಡೀ ರಕ್ತದಿಂದ ಒದ್ದೆಯಾಯಿತು. ಹಝ್ರತ್ ಝೈದ್ ಬಿನ್ ಹಾರಿಸರ ತಲೆಗೂ ಕಲ್ಲಿನಿಂದ ಗಾಯವಾಯಿತು. ಏಕೆಂದರೆ ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಸೆಯಲಾದ ಕಲ್ಲುಗಳನ್ನು ಅವರಿಗೆ ಬೀಳದಂತೆ ತಡೆಯಲು ಪ್ರಯತ್ನಿಸುತ್ತಾ ಇದ್ದರು. ಸುಮಾರು ಮೂರು ಮೈಲು ದೂರದ ತನಕ ಈ ಪುಂಡರು ಅವರನ್ನು ಬೈಯ್ಯುತ್ತಾ ಕಲ್ಲೆಸೆಯುತ್ತಾ ಹಿಂಬಾಲಿಸಿದರು.

ತಾಯಿಫ್ ನಗರದಿಂದ ಮೂರು ಮೈಲು ದೂರದಲ್ಲಿ ಮಕ್ಕದ ಒಬ್ಬ ಗಣ್ಯ ವ್ಯಕ್ತಿಯಾದ ಉತ್‌ಬ ಬಿನ್ ರಬೀಅರ ಒಂದು ತೋಟವಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ತೋಟವನ್ನು ಪ್ರವೇಶಿಸಿದಾಗ ದೌರ್ಜನ್ಯಗಾರರಾದ ಜನರು ದಣಿದು ಮರಳಿ ಹೋದರು. ಈ ತೋಟದಲ್ಲಿ ಒಂದು ಮರದ ನೆರಳಿನಲ್ಲಿ ನಿಂತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನನ್ನು ಸಂಬೋಧಿಸಿ ಹೀಗೆ ಪ್ರಾರ್ಥಿಸಿದ್ದರು: ಓ ನನ್ನ ಪ್ರಭು, ನನ್ನ ಬಲಹೀನತೆಯನ್ನೂ ಕಾರ್ಯ ಕ್ಷಮತೆಯ ಕೊರತೆಯನ್ನೂ ಜನರೆದುರಿಗೆ ನನ್ನ ನಿಸ್ಸಹಾಯಕತೆಯನ್ನೂ ನಾನು ನಿನ್ನ ಬಳಿಯೇ ನಿವೇದಿಸಿಕೊಳ್ಳುತ್ತೇನೆ. ಓ ನನ್ನ ದೇವ, ನೀನು ಎಲ್ಲರಿಗಿಂತಲೂ ಮಿಗಿಲಾಗಿ ಕಾರುಣ್ಯ ದೋರುವವನಾಗಿರುವೆ. ಬಲಹೀನರಿಗೂ ನಿರ್ಗತಿಕರಿಗೂ ನೀನೇ ಮೇಲ್ವಿಚಾರಕನೂ ಸಂರಕ್ಷಕನೂ ಆಗಿರುವೆ. ಓ ನನ್ನ ಸಂರಕ್ಷಕ, ನಾನು ನಿನ್ನ ವದನದ ಪ್ರಕಾಶದಲ್ಲಿ ಆಶ್ರಯವನ್ನು ಬೇಡಿಕೊಳ್ಳುತ್ತೇನೆ. ಏಕೆಂದರೆ ಅಂಧಕಾರವನ್ನು ದೂರ ಸರಿಸುವವನೂ ಇಹಲೋಕ ಪರಲೋಕಗಳ ಒಳಿತುಗಳಿಗೆ ವಾರೀಸುದಾರರನ್ನಾಗಿ ಮಾಡುವವನೂ ನೀನೇ ಆಗಿರುವೆ.

ಉತ್‌ಬ ಮತ್ತು ಶೈಬ ಆಗ ತಮ್ಮ ಆ ತೋಟದಲ್ಲಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಿನ ಸ್ಥಿತಿಯನ್ನು ನೋಡಿ ತಮಗಿರುವ ದೂರದ ಸಂಬಂಧದ ಕಾರಣದಿಂದಲೋ ಅಥವಾ ತಮ್ಮ ಜನಾಂಗೀಯ ಪ್ರಜ್ಞೆಯಿಂದಲೋ ಅಥವಾ ಬೇರೆ ಯಾವುದಾದರೂ ಅಜ್ಞಾತ ಕಾರಣದಿಂದಲೋ ತಮ್ಮ ಕ್ರೈಸ್ತ ಧರ್ಮ ವಿಶ್ವಾಸಿ ಗುಲಾಮನಾದ ಅದ್ದಾಸನ ಕೈಯಲ್ಲಿ ಒಂದು ಬಟ್ಟಲಲ್ಲಿ ದ್ರಾಕ್ಷೆ ಹಾಕಿ ಅವರ ಬಳಿಗೆ ಕಳುಹಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದನ್ನು ತೆಗೆದುಕೊಂಡು ಅದ್ದಾಸನೊಂದಿಗೆ ಕೇಳಿದರು: ನೀನು ಯಾವ ಊರಿನವನು? ನಿನ್ನ ಧರ್ಮ ಯಾವುದು? ಅದ್ದಾಸ್ ಹೇಳಿದನು: ನಾನು ನೀನೆವ ನಿವಾಸಿಯಾದ ಕ್ರೈಸ್ತನಾಗಿದ್ದೇನೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು–

ಅಲ್ಲಾಹನ ಸಾತ್ವಿಕ ದಾಸ ಯೂನುಸ್ ಬಿನ್ ಮತ್ತರವರ ಊರಾದ ನಿನೇವದ ನಿವಾಸಿಯೇ ನೀನು? ಅದ್ದಾಸ್ ಹೇಳಿದನು: ಹೌದು. ಆದರೆ ತಮಗೆ ಯೂನುಸ್ ಬಗ್ಗೆ ತಿಳಿದುದು ಹೇಗೆ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅವರು ನನ್ನ ಸಹೋದರನಾಗಿದ್ದರು. ಏಕೆಂದರೆ ಅವರು ಅಲ್ಲಾಹನ ಪ್ರವಾದಿಯಾಗಿದ್ದರು. ನಾನು ಸಹ ಪ್ರವಾದಿಯಾಗಿದ್ದೇನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದ್ದಾಸನಿಗೆ ತಬ್ಲೀಗ್ ಮಾಡಿದರು. ಆತನ ಮೇಲೆ ಅದರ ಪ್ರಭಾವ ತಲೆದೋರಿತು. ಅವನು ಮುಂದೆ ಬಂದು ಭಾವಪರವಶನಾಗಿ ಅವರ ಕೈಯ್ಯನ್ನು ಚುಂಬಿಸಿದನು. ದೂರದಿಂದ ಉತ್‌ಬ ಮತ್ತು ಶೈಬ ಈ ದೃಶ್ಯವನ್ನು ನೋಡುತ್ತಿದ್ದರು. ಅದ್ದಾಸ್ ಅವರ ಬಳಿಗೆ ಮರಳಿದಾಗ ಅವರು ಕೇಳಿದರು: ನೀನು ಆ ವ್ಯಕ್ತಿಯ ಕೈಗಳನ್ನು ಚುಂಬಿಸಲು ಕಾರಣವೇನು, ನೀನಗೇನಾಯಿತು. ಆ ವ್ಯಕ್ತಿ ನಿನ್ನ ಧರ್ಮವನ್ನು ಕೆಡಿಸುವನು. ವಾಸ್ತವಿಕವಾಗಿ ನಿನ್ನ ಧರ್ಮ ಅವನ ಧರ್ಮಕ್ಕಿಂತ ಉತ್ತಮವಾಗಿದೆ.

ಹಝ್ರತ್ ಝೈದ್ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಸೈದ್ ಬಿನ್ ಹಝೀರ್‌ರೊಂದಿಗೆ ಅವರಿಗೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಬೇರೆ ಕೆಲವು ವರದಿಗಳ ಪ್ರಕಾರ ಹಝ್ರತ್ ಹಮ್‌ಝರೊಂದಿಗೆ ಅವರ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಎಂದರೆ ಹಝ್ರತ್ ಹಮ್‌ಝರನ್ನು ಅವರ ಸಹೋದರನನ್ನಾಗಿ ಮಾಡಲಾಯಿತು. ಇದೇ ಕಾರಣದಿಂದ ಉಹುದ್ ಯುದ್ಧದ ದಿನ ಹಝ್ರತ್ ಹಮ್‌ಝರವರು ಹಝ್ರತ್ ಝೈದರನ್ನು ತನ್ನ ವಾರೀಸುದಾರನಾಗಿ ವಸಿಯ್ಯತ್ ಮಾಡಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಮದೀನಕ್ಕೆ ತಲಪಿದ ಸ್ವಲ್ಪ ದಿನಗಳ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದ್ ಬಿನ್ ಹಾರಿಸರಿಗೆ ಸ್ವಲ್ಪ ಹಣ ಕೊಟ್ಟು ಮಕ್ಕಕ್ಕೆ ಕಳುಹಿಸಿದರು. ಸ್ವಲ್ಪ ದಿನಗಳ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಯವರನ್ನು ಕರೆದುಕೊಂಡು ಹಝ್ರತ್ ಝೈದ್ ಸುರಕ್ಷಿತವಾಗಿ ಮದೀನ ತಲಪಿದರು.

ಹಝ್ರತ್ ಝೈದ್ ಬಿನ್ ಹಾರಿಸ ಹಝ್ರತ್ ಉಮ್ಮು ಐಮನ್‌ರನ್ನು ವಿವಾಹವಾಗಿದ್ದರು. ಆಕೆ ತನ್ನ ಪುತ್ರ ಐಮನ್ ಕಾರಣದಿಂದ ಉಮ್ಮು ಐಮನ್ ಎಂಬ ಉಪನಾಮ ಹೊಂದಿದ್ದರು. ಆಕೆ ಅಬಿಸೀನಿಯಾ ದೇಶದವರಾಗಿದ್ದರು. ಆಕೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತ ಹಝ್ರತ್ ಅಬ್ದುಲ್ಲಾರವರ ಸೇವಕಿಯಾಗಿದ್ದರು. ಹಝ್ರತ್ ಅಬ್ದುಲ್ಲಾ ನಿಧನ ಹೊಂದಿದ ನಂತರ ಆಕೆ ಹಝ್ರತ್ ಆಮಿನರ ಜೊತೆಗೆ ವಾಸಿಸುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆರು ವರ್ಷ ಪ್ರಾಯದವರಾಗಿದ್ದಾಗ ಅವರ ಮಾತೆ ಅವರನ್ನು ತನ್ನ ತವರು ಮನೆಯಿದ್ದ ಮದೀನಕ್ಕೆ ಕರೆದುಕೊಂಡು ಹೋದರು. ಆಗ ಹಝ್ರತ್ ಉಮ್ಮು ಐಮನ್ ಸೇವಕಿಯಾಗಿ ಜೊತೆಗಿದ್ದರು. ಆಗ ಆಕೆ ಚಿಕ್ಕವಳಾಗಿರಬಹುದು. ಮರಳಿ ಬರುವಾಗ ಹಝ್ರತ್ ಆಮಿನ ನಿಧನ ಹೊಂದಿದರು. ಹಝ್ರತ್ ಉಮ್ಮು ಐಮನ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮಕ್ಕದಿಂದ ಮದೀನಕ್ಕೆ ಹೋದ ಎರಡು ಒಂಟೆಗಳೊಂದಿಗೆ ಕರೆದುಕೊಂಡು ಮಕ್ಕಕ್ಕೆ ಮರಳಿ ಬಂದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಾನು ಪ್ರವಾದಿ ಎಂದು ವಾದಿಸುವ ಮೊದಲೇ ಮಕ್ಕದಲ್ಲಿ ಹಝ್ರತ್ ಉಮ್ಮು ಐಮನರ ವಿವಾಹವನ್ನು ಉಬೈದ್ ಬಿನ್ ಝೈದರೊಂದಿಗೆ ಮಾಡಿಸಿದರು. ಆ ವ್ಯಕ್ತಿ ಅಬಿಸೀನಿಯಾ ದೇಶವಾಸಿಯಾಗಿದ್ದ ಗುಲಾಮನಾಗಿದ್ದರು. ಈ ವಿವಾಹದಿಂದ ಜನಿಸಿದ ಪುತ್ರನ ಹೆಸರು ಐಮನ್ ಎಂದಾಗಿತ್ತು. ಹಝ್ರತ್ ಐಮನ್ ಹುನೈನ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಉಮ್ಮು ಐಮನರ ಪತಿ ಸಹ ನಿಧನ ಹೊಂದಿದರು. ಅನಂತರ ಆಕೆಯ ವಿವಾಹ ಹಝ್ರತ್ ಝೈದ್‌ರೊಂದಿಗೆ ನಡೆಸಲಾಯಿತು. ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಉಮ್ಮು ಐಮನ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅತ್ಯಂತ ಸಹಾನುಭೂತಿಯಿಂದ ವರ್ತಿಸುತ್ತಿದ್ದರು ಮತ್ತು ಯಾವಾಗಲೂ ಅವರ ಬಗ್ಗೆ ಕಾಳಜಿ ಇರುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸ್ವರ್ಗವನ್ನು ಪ್ರವೇಶಿಸಲಿರುವ ಮಹಿಳೆಯೊಂದಿಗೆ ವಿವಾಹವಾಗಿ ಸಂತೋಷಭರಿತರಾಗಲು ಬಯಸುವವರು ಉಮ್ಮು ಐಮನರನ್ನು ವಿವಾಹವಾಗಬೇಕು. ಆಗ ಹಝ್ರತ್ ಝೈದ್ ಬಿನ್ ಹಾರಿಸ ಆಕೆಯನ್ನು ವಿವಾಹವಾದರು. ಆ ವಿವಾಹದಿಂದ ಹಝ್ರತ್ ಉಸಾಮ ಜನಿಸಿದರು. ಹಝ್ರತ್ ಉಮ್ಮು ಐಮನ್ ಇತರ ಮುಸ್ಲಿಮರೊಂದಿಗೆ ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಿದ್ದರು. ಅಲ್ಲಿಂದ ಮದೀನಕ್ಕೆ ಹಿಜ್‌ರತ್ ಮಾಡಿದರು. ಅವರು ಉಹುದ್ ಯುದ್ಧದಲ್ಲಿ ಭಾಗವಹಿಸಿ ಜನರಿಗೆ ನೀರು ಕುಡಿಸುತ್ತಿದ್ದರು ಮತ್ತು ಗಾಯಾಳುಗಳನ್ನು ಉಪಚರಿಸುತ್ತಿದ್ದರು. ಖೈಬರ್ ಯುದ್ಧದಲ್ಲಿ ಭಾಗವಹಿಸಲು ಭಾಗ್ಯ ಸಹ ಆಕೆಗೆ ಲಭಿಸಿತು. ಹಿಜರಿ 23ರಲ್ಲಿ ಹಝ್ರತ್ ಉಮರ್(ರ) ಶಹೀದರಾದಾಗ ಹಝ್ರತ್ ಉಮ್ಮು ಐಮನ್ ಬಹಳ ರೋಧಿಸಿದ್ದರು. ಜನರು ಆಕೆಯೊಂದಿಗೆ ಏಕೆ ಅಳುತ್ತಿರುವೆ? ಎಂದು ವಿಚಾರಿಸಿದಾಗ ಆಕೆ ಹೇಳಿದರು: ಹಝ್ರತ್ ಉಮರರ ಶಹಾದತ್ ಕಾರಣದಿಂದ ಇಸ್ಲಾಮ್ ಬಲಹೀನವಾಯಿತು. ಹಝ್ರತ್ ಉಮ್ಮು ಐಮನ್ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದ ಆರಂಭದಲ್ಲಿ ನಿಧನ ಹೊಂದಿದರು.

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ: ಮಕ್ಕದಿಂದ ಹಿಜ್‌ರತ್ ಮಾಡಿ ಮದೀನಕ್ಕೆ ಬಂದ ಮುಹಾಜಿರ್‌ಗಳ ಕೈಯಲ್ಲಿ ಏನೂ ಇರಲಿಲ್ಲ. ಅನ್‌ಸಾರ್‌ಗಳು ಭೂಸ್ವತ್ತು ಹೊಂದಿದವರಾಗಿದ್ದರು. ಆಗ ಮುಹಾಜಿರ್‌ಗಳೊಂದಿಗೆ ಅನ್‌ಸಾರ್‌ಗಳು ಒಪ್ಪಂದ ಮಾಡಿದರು. ಅನ್‌ಸಾರ್‌ಗಳು ತಮ್ಮ ತೋಟಗಳ ಹಣ್ಣುಗಳನ್ನು ಪ್ರತಿವರ್ಷ ಮಹಾಜಿರ್‌ಗಳಿಗೆ ಕೊಡುವೆವು ಎಂದು. ಆದರೆ ತೋಟದ ಕೆಲಸಗಳನ್ನು ಅನ್‌ಸಾರ್‌ಗಳು ಸ್ವತಃ ಮಾಡುವರು ಎಂದು. ಹಝ್ರತ್ ಅನಸ್‌ರವರ ತಾಯಿ ಹಝ್ರತ್ ಉಮ್ಮು ಸಲೀಮ್ ಹಝ್ರತ್ ರಸೂಲ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರಿಗೆ ತನ್ನ ತೋಟದ ಖರ್ಜೂರದ ಕೆಲವು ಮರಗಳನ್ನು ನೀಡಿದಾಗ ಅವರು ಆ ಮರಗಳನ್ನು ಉಮ್ಮು ಐಮನರಿಗೆ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖೈಬರ್ ಯುದ್ಧ ಮುಗಿದು ಮರಳಿದಾಗ ಮಹಾಜಿರ್‌ಗಳು, ಅನ್ಸಾರ್‌ಗಳು ತಮಗೆ ನೀಡಿದ ಕೊಡುಗೆಗಳನ್ನು ಮರಳಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನಗೆ ಹಝ್ರತ್ ಅನಸ್‌ರ ತಾಯಿ ನೀಡಿದ ಖರ್ಜೂರದ ಮರಗಳನ್ನು ಅವರಿಗೆ ಮರಳಿ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ತೋಟದ ಕೆಲವು ಖರ್ಜೂರ ಮರಗಳನ್ನು ಉಮ್ಮು ಐಮನರಿಗೆ ನೀಡಿದರು.

ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಉಮ್ಮು ಐಮನ್ ಮದೀನಕ್ಕೆ ಕಾಲುನಡೆಯಾಗಿ ಹಿಜ್‌ರತ್ ಮಾಡುವಾಗ ಬಹಳ ಕಠಿಣವಾದ ಬಾಯಾರಿಕೆ ಉಂಟಾಯಿತು. ಅವರು ಬಹಳ ಸಾತ್ವಿಕಳಾದ ಮಹಿಳೆಯಾಗಿದ್ದರು. ಅಲ್ಲಾಹನೊಂದಿಗೆ ಆಕೆಗೆ ವಿಶಿಷ್ಟ ಸಾಮೀಪ್ಯವಿತ್ತು. ಆ ಸಮಯದಲ್ಲಿ ಆಕೆಯ ಬಳಿ ನೀರಿರಲಿಲ್ಲ. ಸೆಖೆ ಬಹಳ ತೀವ್ರವಾಗಿತ್ತು. ಆಕೆಗೆ ತನ್ನ ತಲೆಯ ಮೇಲೆ ಯಾವುದೋ ವಸ್ತುವಿನ ಶಬ್ದ ಕೇಳಿಸಿತು. ಆಕೆ ನೋಡಿದಾಗ ಆಕಾಶದಿಂದ ಡೋಲಿನ ಹಾಗಿರುವ ಒಂದು ವಸ್ತು ಇಳಿದು ಬರುತ್ತಿದೆ. ಅದರಿಂದ ನೀರಿನ ಬಿಂದುಗಳು ಸುರಿಯುತ್ತಿದ್ದುವು. ಆಕೆ ಅದರಿಂದ ನೀರು ಕುಡಿದರು ಮತ್ತು ಆಕೆಯ ಬಾಯಾರಿಕೆ ನಿವಾರಣೆಯಾಯಿತು. ಆಕೆ ಹೇಳುತ್ತಿದ್ದರು: ಅನಂತರ ನನಗೆ ಎಂದೂ ದಾಹದ ಅನುಭವವಾಗುತ್ತಿರಲಿಲ್ಲ. ಉಪವಾಸದ ಕಾಲದಲ್ಲಿಯೂ ನನಗೆ ಬಾಯಾರಿಕೆಯಿದ್ದರೂ ನಾನು ಬಾಯಾರಿಕೆಯಿಂದ ಬಳಲುತ್ತಿರಲಿಲ್ಲ. ಹಝ್ರತ್ ಉಮ್ಮು ಐಮನರಿಗೆ ನಾಲಗೆಯಲ್ಲಿ ಸ್ವಲ್ಪ ಉಗ್ಗು ಇತ್ತು. ಆದಕಾರಣ ಅವರು ಜನರನ್ನು ಕಂಡಾಗ ಸಲಾಮುಲ್ಲಾಹಿ ಅಲೈಕುಂ ಎಂದು ಹೇಳುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಸಲಾಮುಲ್ಲಾಹ್ ಅಲೈಕುಮ್ ಎಂಬುದಕ್ಕೆ ಬದಲಾಗಿ ಸಲಾಮುನ್ ಅಲೈಕುಮ್ ಅಥವಾ ಅಸ್ಸಲಾಮು ಅಲೈಕುಮ್ ಎಂದು ಹೇಳಲು ಅನುಮತಿ ನೀಡಿದರು. ಈಗ ಅದೇ ರೀತಿ ರೂಢಿಯಲ್ಲಿದೆ.

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಉಮರ್(ರ)ರೊಂದಿಗೆ ಹೇಳಿದರು: ನಾವು ಹೋಗಿ ಹಝ್ರತ್ ಉಮ್ಮು ಐಮನರನ್ನು ಭೇಟಿಯಾಗೋಣ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಭೇಟಿಯಾಗುತ್ತಿದ್ದ ರೀತಿಯಲ್ಲಿ ಅವರಿಬ್ಬರೂ ಹಝ್ರತ್ ಉಮ್ಮು ಐಮನರ ಬಳಿಗೆ ಹೋದಾಗ ಉಮ್ಮು ಐಮನ್ ಅತ್ತರು. ಆಗ ಅವರಿಬ್ಬರೂ ಕೇಳಿದರು: ನೀವು ಏಕೆ ಅಳುತ್ತಿದ್ದೀರಿ. ಅಲ್ಲಾಹನ ಬಳಿ ಇರುವುದೆಲ್ಲವೂ ಅವನ ರಸೂಲರಿಗೆ ಉತ್ತಮವಾಗಿವೆ. ಹಝ್ರತ್ ಉಮ್ಮು ಐಮನ್ ಹೇಳಿದರು: ನಾನು ಅಳುತ್ತಾ ಇರುವುದೇಕೆಂದರೆ ಈಗ ಅಲ್ಲಾಹನಿಂದ ಸಂದೇಶ ಅವತೀರ್ಣವಾಗುವುದು ನಿಂತಿದೆ. ಆಕೆಯ ಮಾತನ್ನು ಆಲಿಸಿ ಅವರಿಬ್ಬರೂ ಅತ್ತರು.

ಹಝ್ರತ್ ಝೈದ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿಮೋಚಿಸಿದ ಗುಲಾಮನೂ ಅವರ ಬಾಯಿ ಮಾತಿನ ಮಗನೂ ಆಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈದರ ಒಂದು ವಿವಾಹವನ್ನು ಹಝ್ರತ್ ಝೈನಬ್ ಬಿನ್ತ್ ಜುಹ್‌ಶ್‌ರೊಂದಿಗೆ ಮಾಡಿಸಿದ್ದರು. ಆದರೆ ಈ ವಿವಾಹ ದೀರ್ಘಕಾಲ ಬಾಳಲಿಲ್ಲ. ಹಝ್ರತ್ ಝೈದ್ ಹಝ್ರತ್ ಝೈನಬರಿಗೆ ತಲಾಖ್ ನೀಡಿದರು. ಈ ವಿವಾಹ ಒಂದು ವರ್ಷ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಿನ ಕಾಲದ ತನಕ ಜಾರಿಯಲ್ಲಿತ್ತು. ತಲಾಖ್ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈನಬ್ ಬಿನ್ತ್ ಜುಹ್‌ಶ್‌ರನ್ನು ವಿವಾಹವಾದರು.

(ಸೀರತೆ ಖಾತಮುನ್ನಬಿಯ್ಯೀನ್ ಗ್ರಂಥದಿಂದ ಈ ವಿವಾಹದ ಬಗ್ಗೆ ವಿವರಣೆ ನೀಡುತ್ತಾ ಹುಝೂರ್ ಹೇಳಿದರು:) ಹಝ್ರತ್ ಝೈನಬ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃ ಸಹೋದರಿ ಅಮೀಮ ಬಿನ್ತ್ ಅಬ್ದುಲ್ ಮುತ್ತಲಿಬರ ಪುತ್ರಿಯಾಗಿದ್ದರು. ಅವರು ಅತ್ಯಂತ ಸಾತ್ವಿಕಳೂ ಮುತ್ತಖಿಯೂ ಆಗಿದ್ದರೂ ಅವರಲ್ಲಿ ತನ್ನ ಕುಟುಂಬದ ಹಿರಿಮೆಯ ಬಗ್ಗೆ ಅಭಿಮಾನ ಸಹ ಇತ್ತು. ತನ್ನ ಈ ಸಂಬಂಧಿಕಳ ವಿವಾಹ ಹಝ್ರತ್ ಝೈದ್‌ರೊಂದಿಗೆ ಮಾಡಿಸುವ ಪ್ರಸ್ತಾಪ ಮಾಡಿದಾಗ ಮೊದಲು ಹಝ್ರತ್ ಝೈನಬ ತನ್ನ ಕುಟುಂಬದ ಹಿರಿಮೆಯನ್ನು ಪರಿಗಣಿಸಿ ಇಷ್ಟಪಡಲಿಲ್ಲ. ಆದರೆ ಕೊನೆಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೀವ್ರ ಅಭಿಲಾಷೆಯನ್ನು ನೋಡಿ ವಿವಾಹಕ್ಕೆ ಸಮ್ಮತಿಸಿದರು. ಈ ವಿವಾಹವನ್ನು ಹಝ್ರತ್ ಝೈನಬ್ ಬಹಳ ಸಭ್ಯತೆಯಿಂದ ನಿಭಾಯಿಸಿದರು. ಆದರೆ ಹಝ್ರತ್ ಝೈನಬರ ಹೃದಯದಲ್ಲಿ ತಾನು ಒಂದು ಪ್ರತಿಷ್ಠಿತ ಕುಟುಂಬದವಳು ಎಂಬ ಅಭಿಮಾನವಿತ್ತು. ಅದೇ ರೀತಿ ಹಝ್ರತ್ ಝೈದರಿಗೆ ತನ್ನ ಸ್ಥಾನದ ಬಗ್ಗೆ ಕೀಳರಿಮೆ ಸಹ ಇತ್ತು. ಅವರ ಈ ಭಾವನೆ ಕ್ರಮೇಣ ಬಲಿಷ್ಠವಾಗಿ ಅವರ ಜೀವಿತವನ್ನು ನೀರಸಗೊಳಿಸಿತು. ಪತಿ ಪತ್ನಿಯರಲ್ಲಿ ಸಾಮರಸ್ಯವಿಲ್ಲದಾಯಿತು. ಇದು ವರ್ಧಿಸಿದಾಗ ಹಝ್ರತ್ ಝೈದ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೂರಿತ್ತರು. ಹಝ್ರತ್ ಝೈನಬ್ ಕಟುಮಾತುಗಳನ್ನು ಬಳಸುತ್ತಾಳೆ ಆದುದರಿಂದ ನಾನು ಆಕೆಗೆ ತಲಾಖ್ ನೀಡಲು ಬಯಸುತ್ತೇನೆ ಎಂದು ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ತಲಾಖ್ ನೀಡಬೇಡ' ಎಂದೂ 'ತಖ್ವವನ್ನು ಅವಲಂಬಿಸು' ಎಂದೂ ಹಝ್ರತ್ ಝೈದರಿಗೆ ಉಪದೇಶಿಸಿದರು. ವಿವಾಹವನ್ನು ಹೇಗಾದರೂ ಮುಂದುವರಿಸಲು ಹೇಳಿದರು. ಹಝ್ರತ್ ಝೈದ್ ತಲೆ ತಗ್ಗಿಸಿ ಮೌನವನ್ನು ಅವಲಂಬಿಸಿ ಮರಳಿದರು. ಆದರೆ ಬಿಗಡಾಯಿಸಿದ ಸಂಬಂಧವನ್ನು ಸರಿಪಡಿಸುವುದು ಕಷ್ಟಕರವಾಗಿತ್ತು. ಸಂಬಂಧದಲ್ಲಿ ಬಿರುಕು ವರ್ಧಿಸಿತು. ಯಾವುದು ಸರಿಯಾಗಲಾರದೋ ಅದು ಸರಿಯಾಗಲೂ ಇಲ್ಲ. ಸ್ವಲ್ಪ ಸಮಯದ ನಂತರ ಹಝ್ರತ್ ಝೈದ್ ತಲಾಖ್

ನೀಡಿದರು. ತಲಾಖ್ ನಂತರ ಇದ್ದತ್ ಕಾಲಾವದಿ ಕೊನೆಗೊಂಡಾಗ ಅವರನ್ನು ವಿವಾಹವಾಗಬೇಕೆಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನ ಸಂದೇಶವಾಣಿ ಲಭಿಸಿತು. ಅಲ್ಲಾಹನ ಈ ಆಜ್ಞೆಯ ಉದ್ದೇಶ ಹಝ್ರತ್ ಝೈನಬರಿಗೆ ಮಾನಸಿಕ ನೆಮ್ಮದಿ ನೀಡುವುದು ಮಾತ್ರವಲ್ಲ ತಲಾಖ್ ನೀಡಲ್ಪಟ್ಟ ಮಹಿಳೆಯನ್ನು ವಿವಾಹವಾಗುವುದು ಮುಸ್ಲಿಮರಲ್ಲಿ ಒಂದು ನ್ಯೂನತೆಯಾಗಿ ಗಣಿಸಲ್ಪಡಬಾರದು ಎಂದು ಸಹ ಇತ್ತು. ಹಝ್ರತ್ ಝೈದ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪುತ್ರನೆಂದು ಕರೆಯಲ್ಪಡುತ್ತಿದ್ದುದರಿಂದ ಹಝ್ರತ್ ಝೈದ್ ತಲಾಖ್ ನೀಡಿದ ಮಹಿಳೆಯನ್ನು ವಿವಾಹವಾಗುವುದರಿಂದ ಮುಸ್ಲಿಮರಿಗೆ ಒಂದು ಕರ್ಮ ರೂಪದ ಉದಾಹರಣೆ ಸಹ ಲಭಿಸಿದಂತಾಯಿತು. ಬಾಯಿ ಮಾತಿನಲ್ಲಿ ಪುತ್ರನೆಂದು ಒಬ್ಬನನ್ನು ಕರೆದರೆ ಅವನು ವಾಸ್ತವಿಕ ಪುತ್ರನಾಗುವುದಿಲ್ಲ ಮತ್ತು ಅವನಿಗೆ ಸಂಬಂಧಿಸಿ ವಾಸ್ತವಿಕ ಪುತ್ರರಿಗೆ ಸಂಬಂಧಿಸಿದ ದೇವಾಜ್ಞೆಗಳು ಅನ್ವಯ ಆಗುವುದಿಲ್ಲ ಮತ್ತು ಅಜ್ಞಾನ ಕಾಲದ ಆಚಾರ ಮುಸ್ಲಿಮರಲ್ಲಿ ಸಂಪೂರ್ಣವಾಗಿ ಅಳಿಸಿಬಿಡುವಂತಾಗುವುದು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈನಬರನ್ನು ವಿವಾಹವಾಗುವುದನ್ನು ತೀರ್ಮಾನಿಸಿ ಈ ಸಂದೇಶವನ್ನು ಝೈನಬರಿಗೆ ಹಝ್ರತ್ ಝೈದ್‌ರ ಮೂಲಕವೇ ಕಳುಹಿಸಿದರು. ಹಝ್ರತ್ ಝೈನಬ್ ವಿವಾಹಕ್ಕೆ ಸಮ್ಮತಿಸಿದಾಗ ಅವರ ಸಹೋದರ ಅಬೂ ಅಹ್ಮದ್ ಬಿನ್ ಜುಹ್‌ಶ್ ಅವರ ವಲಿಯಾಗಿ ನಾನೂರು ದಿರ್‌ಹಮ್ ಮಹರ್ ನಿಶ್ಚಯಿಸಿ ವಿವಾಹ ಮಾಡಿಕೊಟ್ಟರು. ಅರಬ್ ದೇಶದಲ್ಲಿ ಪುರಾತನ ಕಾಲದಿಂದ ಜಾರಿಯಲ್ಲಿದ್ದ ಸಂಪ್ರದಾಯವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಯ್ಯಕ್ತಿಕ ಉದಾಹರಣೆ ಮೂಲಕ ಇಸ್ಲಾಮ್‌ನಲ್ಲಿ ಬೇರುಸಹಿತ ಕಿತ್ತೆಸೆಯಲಾಯಿತು.

ಈ ಸಂದರ್ಭದಲ್ಲಿ ಒಂದು ವಿಷಯದ ಬಗ್ಗೆ ಪ್ರಸ್ತಾಪಿಸುವುದು ಆವಶ್ಯಕವಾಗಿದೆ. ಸಾಮಾನ್ಯ ಚರಿತ್ರೆಗಾರರು ಮತ್ತು ಹದೀಸು ಪಂಡಿತರು ಯೋಚಿಸುವುದು ಏನೆಂದರೆ ಝೈನಬರೊಂದಿಗೆ ವಿವಾಹದ ಬಗ್ಗೆ ಅಲ್ಲಾಹನ ವಹೀ ಅವತೀರ್ಣವಾದುದರಿಂದ ಅಲ್ಲಾಹನ ವಿಶಿಷ್ಟ ಆಜ್ಞೆಯಿಂದ ಈ ವಿವಾಹ ನಡೆಸಲ್ಪಟ್ಟ ಕಾರಣ ಬಾಹ್ಯವಾದ ವಿವಾಹ ನಡೆಸುವ ಕರ್ಮಗಳು ನಡೆಸಲಾಗಲಿಲ್ಲ ಎಂದು. ಆದರೆ ಈ ಯೋಚನೆ ತಪ್ಪಾಗಿದೆ. ಬುಖಾರಿಯ ಹದೀಸು ಗ್ರಂಥದಲ್ಲಿ ಹೀಗೆ ವರದಿಯಾಗಿದೆ: ವಿವಾಹದ ನಂತರ ಹಝ್ರತ್ ಝೈನಬ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗೆ ತನ್ನ ಮನೆಬಿಟ್ಟು ಆಗಮಿಸಿದರೆಂದು. ಇಬ್ನು ಹಿಶಾಮ್ ವರದಿಯಲ್ಲಿ ಸ್ಪಷ್ಟವಾಗಿ ಹೀಗೆ ಹೇಳಲಾಗಿದೆ: ವಿವಾಹದ ಬಗ್ಗೆ ಅಲ್ಲಾಹನ ಆಜ್ಞೆ ದೊರೆತಿದ್ದರೂ ವಿವಾಹ ನಡೆಸುವ ಬಾಹ್ಯ ಕರ್ಮಗಳನ್ನು ಮಾಡಲಾಗಿತ್ತು. ಹೀಗೆ ಸಂಭವಿಸಿರಬೇಕೆಂದು ವಿವೇಕ ಸಹ ಅವಶ್ಯಪಡುತ್ತದೆ. ಏಕೆಂದರೆ ಸಾಮಾನ್ಯವಾಗಿ ನಡೆಸುವ ಒಂದು ಆಚರಣೆಯಲ್ಲಿ ಯಾವುದೇ ವಿನಾಯಿತಿಯ ಕಾರಣವಿರಲಿಲ್ಲ. ಎರಡನೆಯದಾಗಿ ಒಂದು ಆಚಾರವನ್ನು ಮುರಿದು ಹಾಕುವುದು ಮತ್ತು ಅದರ ಪ್ರಭಾವವನ್ನು ಅಳಿಸಿ ಬಿಡುವುದು ಈ ವಿವಾಹದ ಉದ್ದೇಶವಾಗಿತ್ತು. ಅರಬ್ ದೇಶದಲ್ಲಿ ಜಾರಿಯಲ್ಲಿದ್ದ ಬಹಳ ದೃಢವಾದ ಸಂಪ್ರದಾಯವೇನೆಂದರೆ ದತ್ತು ಪುತ್ರನ ಪತ್ನಿಯನ್ನು ವಿವಾಹವಾಗಬಾರದೆಂದು. ಆದುದರಿಂದ ಈ ವಿವಾಹವನ್ನು ಬಹಳ ಪ್ರಕಟಣೆಯೊಂದಿಗೆ ಜರಗಿಸುವುದು ಆವಶ್ಯಕವಾಗಿತ್ತು. ಅನೇಕ ಸಾಕ್ಷಿಗಳ ಮುಂದೆ ಈ ವಿವಾಹ ನಡೆಸಿ ಅರಬ್ ದೇಶದ ಹಳೆಯ ಆಚಾರ ಇಂದಿನಿಂದ ಕೊನೆಗೊಂಡಿದೆ ಎಂದು ಲೋಕಕ್ಕೆ ತಿಳಿಸುವುದು ಆವಶ್ಯಕವಾಗಿತ್ತು.

ಹಝ್ರತ್ ಝೈದ್‌ರಿಗೆ ಸಂಬಂಧಿಸಿ ಇನ್ನಷ್ಟು ಮಾಹಿತಿಗಳಿವೆ. ಮುಂದೆ ಅವುಗಳನ್ನು ವಿವರಿಸಲಾಗುವುದು.

—————————*****—————————


***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh London, UK, On 14-06-2019.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**: khutuba.kannada@gmail.com*



**You can find all the Sermons archived at**: www.alislam.org/friday-sermon